ಕವಿತೆ




## ಎಸ್. ದಿವಾಕರ್

ಕಲೆ: ವಿಶ್ವನಾಥ್ ಎ.ಎಸ್.


# ನಕ್ಷತ್ರಗಳು ರೋದಿಸುತ್ತವೆ



ಒಮ್ಮೊಮ್ಮೆ ಕೆಲವು ನಕ್ಷತ್ರಗಳು ರೋದಿಸುತ್ತವೆ

ಕೇಳಿಸುವುದಿಲ್ಲ ಯಾರಿಗೂ
ಎನ್ನಬಹುದೆ?

ಪಾಳುಬಿದ್ದ ಮನೆಯೊಂದು ಗಡಗಡ ನಡುಗುತ್ತ
ಕೊಡಬಹುದು ಮಾರುತ್ತರ

ಯಾರೋ ಕೈಹಿಡಿದು ಕೈಬಿಟ್ಟ ಲಲನೆಗೆ
ನೀಡಬಹುದು ತುಸು ನೆಮ್ಮದಿ

ಬೀದಿಯ ಕೊನೆಯಲ್ಲಿರುವ ಬೋಳುಮರಕ್ಕೆ
ಜೋತುಬಿದ್ದೊಂದು ಹೆಣ ಅಲುಗಾಡಬಹುದು ಕ್ಷಣ

ಸ್ಥಾವರ ಸ್ಥಿತಿಯಲ್ಲಿರುವ ಗುಡ್ಡಬೆಟ್ಟಗಳು
ಜರುಗಿಬಿಡಬಹುದು ಒಂದಿಷ್ಟು

ನಕ್ಷತ್ರಗಳು ರೋದಿಸಿದ ಮೇಲೆ ಏನಾಗುತ್ತವೆ?
ರಾತ್ರಿ ನೀರವದಲ್ಲಿ ಗಪ್‌ಚಿಪ್